(ಇ) ಈಗಲಾದರೂ ಜಾಗ್ರತೆ ಕಟ್ಟಡವನ್ನು ಕಟ್ಟಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗುವುದೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಶಿಕ್ಷಣ ಮಂತ್ರಿಗಳು).— (ಅ) 1971-72ನೇ ಸಾಲಿನಲ್ಲಿ.

(ಆ) ಶಾಲಾ ಕಟ್ಟಡ ಬಹಳ ಶಿಥಿಲವಾಗಿದ್ದರಿಂದ ಕಟ್ಟಡವನ್ನು ಒಡೆದು ಹಾಕಿ ಅದರಿಂದ ಬಂದ 5000 ರೂ. ಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಇಡಲಾಗಿದೆ, ತಾ 24-6-1975 ರಂದು ಚಿಕ್ಕಮಂಗಳೂರು ಜಿಲ್ಲಾಧಿಕಾರಿಗಳನ್ನು ಈ ಹಣ ಮತ್ತು ಸರ್ಕಾರಿ ಗ್ರ್ಯಾಂಟ್ ಉಪಯೋಗಿಸಿ ಬೇಗನೆ ಕಟ್ಟಡ ಕಟ್ಟಲು ಕೇಳಿಕೊಳ್ಳಲಾಗಿದೆ.

(ಇ) ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು,

ಶ್ರೀ ಹಂಜಿ ಶಿವಣ್ಣ... ಸ್ವಾಮಿ ಸರ್ಕಾರದವರು 1971-72ರಲ್ಲಿ ಹಣ ಒದಗಿಸಿದ್ದಾರೆ ಆದರೂ ಶಾಲಾ ಕಟ್ಟಡ ಕಟ್ಟಿಲ್ಲ ಇದರ ಬಗ್ಗೆ ಅಧಿಕಾರಿಗಳು ಗಮನ ಕೊಡಲಿಲ್ಲವೇ ?

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— 1971-72ರಲ್ಲಿ ಶಾಲಾ ಕಟ್ಟಡಕ್ಕಾಗಿ ಹಣ ಒದಗಿಸಲಾಗಿದೆ. ಆದರೆ ಕಟ್ಟಡ ತುಂಬಾ ಶಿಥಿಲವಾಗಿದ್ದುದರಿಂದ ಕಟ್ಟಡವನ್ನು ಕೆಡವಿ ಸುಮಾರು 5 ಸಾವಿರ ರೂಪಾಯಿಯನ್ನು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಡಿಪಾಸಿಟ್ ಮಾಡಿದ್ದಾರೆ. ಅಲ್ಲದೆ ಜಿಲ್ಲಾಧಿಕಾರಿಗಳಿಗೆ ಶಾಲಾ ಕಟ್ಟಡದ ಕೆಲಸವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ತಿಳಿಸಿದ್ದೇವೆ.

ಶ್ರೀ ಹಂಜಿಶಿವಣ್ಣ.— ಸ್ವಾಮಿ 7-8 ವರ್ಷಗಳಿಂದಲೂ ಅಲ್ಲಿನ ಮಕ್ಕಳಿಗೆ ಶಾಲಾ ಕಟ್ಟಡ ಇಲ್ಲದೇ ತುಂಬಾ ತೊಂದರೆಯಾಗಿದೆ ಆದಷ್ಟು ಜಾಗ್ರತೆ ಅಲ್ಲ ಶಾಲಾ ಕಟ್ಟಡ ಕಟ್ಟಿಸಿ ಮಕ್ಕಳಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಇದು ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗೆ ಸೇರಿದ ಕಟ್ಟಡ ಸುಮಾರು 52 ಸಾವಿರ ರೂಪಾಯಿಗಳು ಬೇಕಾಗುತ್ತದೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಸರ್ಕಾರದವರು ಕೂಡ ಒಂದು ರೀತಿಯ ತೀರ್ಮಾನ ಅಂದರೆ ಸ್ಥಳೀಯ ಕಾಂಟ್ರಿಬ್ಯೂಷನ್ ಪಡೆದು ಸಾಧ್ಯವಾದಷ್ಟು ಬೇಗ ರೂಪ್ಸ ಮಾಡಿ ಕಟ್ಟಡ ಕಟ್ಟಿಸಲಿಕ್ಕೆ ಆದೇಶ ಕೊಡುತ್ತೇವೆ.

SRI B. B. SAYANAK.—When the amount was sanctioned in 1971-72 m y I know whether the school was in a dilapidated condition or not?

SRI M. MALLIKARJUNASWAMY.— It was in a dilapidated condition and that is why it was got dismantied.

House construction by Housiug Board in Mudhol Town

810 K. P. NADGOUDA (Mudhol).—Will the Minister for Finance and Housing be pleased to state :

(*a*) the number of houses which have been complited by the Housing Board in Mudhol Town ;

(*b*) why the houses have not bean allotted and given possession to the allottees even though they have been completed long ago ?

SRI M. Y. GHORPADE (Minister for Finance and Housing). —

(*a*) 40 Houses.

(*b*) Twenty houses under Low Income Group have been already allotted. Twenty houses under the Subsidised Rental Housing Scheme will be allotted by 30th June 1976 after attending to certain items like water supply and extension of electric lines.

ಶ್ರೀ ಕೆ. ಪಿ. ನಾಡಗೌಡ.—ಸ್ವಾಮಿ, ಹೌಸಿಂಗ್ ಬೋರ್ಡಿನವರು ಕಟ್ಟಿರತಕ್ಕ ಅರ್ಧಂಭರ್ದ ಮನೆಗಳನ್ನು ಯಾವಾಗ ಪ್ರಾರಂಭ ಮಾಡಿದ್ದು ಮತ್ತು ಯಾವಾಗ ಮುಗಿಸುತ್ತಾರೆ ಎಂಬುದನ್ನು ಹೇಳುತ್ತಿರಾ ?

† ಶ್ರೀ ಎಂ. ವೈ. ಘೋರ್ಪಡೆ.—ಇದು 1970ರಲ್ಲಿ ಪ್ರಾರಂಭ ಮಾಡಿದ್ದು ಇದು ಇಷ್ಟರೊಳಗೆ ಮುಗಿಸಬೇಕಾಗಿತ್ತು ; ಇವು ಮುಗಿದಿದ್ದರೂ ಇನ್ನೂ ಕೆಲವು ಸೌಕರ್ಯಗಳನ್ನು ಕೊಡಬೇಕು : ಆ ಕಾರಣದಿಂದ 20 ಎಲ್.ಐ.ಜಿ. ಮನೆಗಳನ್ನು ಪೆಭ್ರವರಿ 1973ಕ್ಕೆ ಅಲಾಟ್ ಆಗಿದ್ದರೂ ಇನ್ನೂ ಪೊಜಿಷನ್ ಕೊಟ್ಟಿಲ್ಲ. ಅದನ್ನು ಆಗಸ್ಟ್ ಒಳಗೆ ಕೊಡುತ್ತೇವೆ.

ಶ್ರೀ ಕೆ. ಪಿ. ನಾಡಗೌಡ — ಕಟ್ಟಡಗಳು ಇಷ್ಟು ವಿಳಂಬವಾಗುವುದಕ್ಕೆ ಕಾರಣ ಸಿಮೆಂಟ್ ಧಾರಣ್ ಏರಿದ ಮೇಲೆ ಕಂಟ್ರಾಕ್ಟ್‌ರಿಗೆ ಹೌಸಿಂಗ್ ಬೋರ್ಡ್ ಮುಂದೋಳ್ ಆಡ್ವಾನ್ಸ್ ಡಿಲೆಯಾಗಿದ್ದು ಎಂದು ಕಂಡು ಬಂದಿದೆ ಇದು ನಿಜವೇ ?

ಶ್ರೀ ಎಂ. ವೈ. ಘೋರ್ಪಡೆ.— 20 ಎಲ್.ಐ.ಸಿ. ಮನೆಗಳ ಎಸ್ಟಿಮೇಟು 3 ಲಕ್ಷ 78 ಸಾವಿರ ರೂಪಾಯಿ. ಅದರಲ್ಲಿ 3 ಲಕ್ಷ 34 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಆದರೂ ಕೆಲವು ವಾಟರ್ ಸಪ್ಲೈ ಮತ್ತಿತರ ಸೌಕರ್ಯಗಳನ್ನು ಕೊಡದೇ ಪೊಜಿಷನ್ ಕೊಟ್ಟಿಲ್ಲ ಆಗಸ್ಟ್ ಒಳಗೆ ಕೊಡುತ್ತಾರೆ.

ಶ್ರೀ ಕೆ ಪಿ ನಾಡಗೌಡ — ಸಿಮೆಂಟ್ ಧಾರಣ್ ಏರಿದ ಮೇಲೆ ಬೋರ್ಡಿನವರು ಸಕಾಲಕ್ಕೆ ಸಿಮೆಂಟ್ ಒದಗಿಸದೆ ವಿಳಂಬವಾಗಿದೆ ಎಂದು ತಿಳಿದು ಬಂದಿದೆ.

ಶ್ರೀ ಎಂ. ವೈ. ಘೋರ್ಪಡೆ.— ಹಿಂದೆ ಏನೇ ಆಗಿರಲಿ ಈಗ ಪೂರ್ತಿಯಾಗಿದೆ ಆದುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಬೈರೇಗೌಡ.— ಈ ಮನೆಗಳು ಮುಗಿದಿದ್ದು 1973ರಲ್ಲಿ ಎಂದು ಹೇಳಿದ್ದೀರಿ ಅವಧಿ ಮುಗಿದ ಮೇಲೆ ವಾಸಕ್ಕೆ ಅಲಾಟ್ ಮಾಡುವುದು ಅಕ್ರಮ ಆಲ್ಲವೇ? ಅದಕ್ಕೆ ಬಡ್ತಿ ಎಷ್ಟು ಆಗುತ್ತೆ?

ಶ್ರೀ ಎಂ. ವೈ. ಘೋರ್ಪಡೆ.— ಹೌಸಿಂಗ್‌ಬೋರ್ಡ್ ಮನೆಗಳು ಪೂರ್ತಿಸಲಿಕ್ಕೆ ತಡವಾಗುತ್ತದೆ ಎನ್ನುವುದು ಮಾನ್ಯನದಸ್ಯರಿಗೆ ಗೊತ್ತಿದೆ. ಇತ್ತೀಚೆಗೆ ಈ ಖಾತೆ ನನಗೆ ಬಂದಮೇಲೆ ಇದನ್ನು ಸಂಪೂರ್ಣವಾಗಿ ನಮಗ್ರವಾಗಿ ಪಟ್ಟಿಮಾಡಿಸಿ ಯಾವ ಯಾವ ಕಾರಣಗಳಿಂದ ಎಲ್ಲೆಲ್ಲ ತಡವಾಗಿದೆ ಅದರ ಬಗ್ಗೆ ಸೂಕ್ತಕ್ರಮ ಕೈಗೊಳ್ಳಬೇಕೆಂದು ಆದೇಶಕೊಟ್ಟಿದ್ದೇನೆ. ಅದರ ಪ್ರಕಾರ 4-5 ಮನೆಗಳು ಅಪೂರ್ಣ ಆಗಿದ್ದು ಅವುಗಳನ್ನು ಆದಷ್ಟು ಜಾಗ್ರತೆ ಪೂರ್ತಿಮಾಡಿ ಪೊಜಿಷನ್ ಕೊಡುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತೆ.

ಶ್ರೀ ಬಿ. ಬೈರಪ್ಪಾಜಿ.— 1970ನೇ ಇಸವಿಯಲ್ಲಿ ಪೂರ್ಣ ಮಾಡಿ 1973ರಲ್ಲಿ ಅಲಾಟ್ ಮಾಡಿದ್ದಿರಿ. 1976ನೇ ಇಸವಿ ಆದರೂ ಕೂಡ ಪೊಜಿಷನ್ ಕೊಡದೇ ಇದ್ದೀರಿ ಇದೇ ರೀತಿ ಅನೇಕ ಕಡೆ ಇದೆ ಸಿರ್ಸಿಯಲ್ಲಿ ನೂರಾರು ಮನೆಗಳು ಇದೇರೀತಿ ಇವೆ ಯಾವ ಅಧಿಕಾರಿ ಈ ರೀತಿ ಮಾಡುತ್ತಾರೆ ಹಣ ಬರ್ಬುಮಾಡಿ ಜನಗಳಿಗೆ ಅನುಕೂಲವಾಗದೇ ಇದ್ದರೆ ಅವರ ಮೇಲೆ ಕ್ರಮ ತೆಗೆದು ಕೊಂಡು ತಪ್ಪಿಗೆ ತಕ್ಕ ಶಿಕ್ಷೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

1-30 P M.

ಶ್ರೀ ಎಂ. ವೈ. ಘೋರ್ಪಡೆ.— ಎಲ್ಲೆಲ್ಲಿ ನಿಷ್ಪಪಾತವಾಗಿ ಜವಾಬ್ದಾರಿಯನ್ನು ನಿಗದಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಅಂತಹ ಕಡೆ ಶಿಕ್ಷೆ ಕೊಡಬಹುದು. ಎಲ್ಲಾ ಕಡೆ ಜವಾಬ್ದಾರಿ ನಿಗದಿ ಮಾಡುವುದು ಕಷ್ಟ. ಈಗ ನದ್ಯಕ್ಕೆ ಯಾವುದೇ ಕಾರಣದಿಂದ ವಿಳಂಬವಾಗಿದ್ದರೂ ತಕ್ಷಣ ಪೂರ್ತಿಸಬೇಕಾದುದು ನಮ್ಮ ಕರ್ತವ್ಯ. ಈಗ ಟ್ಯೂನ್ ಕ್ವಾರ್ಟರ್ಸ್‌ಗಳನ್ನು ಕೂಡ ನಾವು ಪೊಸಿಷನ್ ಕೊಡುವುದರಲ್ಲಿ ಸ್ವಲ್ಪ ತಡವಾಗಿದೆ ಈಗ ಅದನ್ನು ಕೊಡುತ್ತೇವೆ. ವಾಟರ್ ಸಪ್ಲೈ ಬಗ್ಗೆ ಪಿ. ಎಚ್. ಇ.

ಡಿವಿಜನ್‌ನವರು ನಾವು ಮಾಡಿಕೊಡುತ್ತೇವೆ ಎಂದು ಒಪ್ಪಿದ್ದಾರೆ ಹೀಗೆ ಹಲವಾರು ಕಾರಣದಿಂದ ತಡವಾಗಿದೆ ಈ ಮುಧೋಳ್ ಹೌಸಿಂಗ್ ವಿಷಯದಲ್ಲಿ ಸ್ವಲ್ಪ ವಿಳಂಬ ಆಗಿದೆ ಇದರ ಬಗ್ಗೆ ನಾವು ಜವಾಬ್ದಾರಿ ಎಷ್ಟರ ಮಟ್ಟಿಗೆ ನಿಗದಿ ಮಾಡಿಸಲಿಕ್ಕೆ ಸಾಧ್ಯ ಎಂಬುದನ್ನು ನೋಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ.— ಈಗ ಮನೆಯನ್ನು ತಾವು ಅಲಾಟ್ ಮಾಡುತ್ತೀರಾ ಆವರು ಇನ್‌ಸ್ಟಾಲ್‌ಮೆಂಟ್ ಕೊಡಬೇಕಾಗುತ್ತದೆ ಅದಕ್ಕೆ ಬಡ್ಡಿ ಹಾಕುತ್ತೀರಾ ಅವಕ್ಕೆ ಅವನು ಕಾರಣ ನಾಗಿರುವುದಿಲ್ಲ ಆದುದರಿಂದ ಬಡ್ಡಿ ಹಾಕತಕ್ಕದ್ದನ್ನು ವಜಾ ಮಾಡುತ್ತಿರಾ ?

Sri M. Y. Ghorpade.— We will take a sympathetic view.

ಧಾರವಾಡ ಜಿಲ್ಲೆಯಲ್ಲಿ ರಿಗ್ ಭಾವಿಗಳನ್ನು ತೋಡುವುದು.

744. ಶ್ರೀ ವಿ. ವಿ. ವಾಯಿ (ಶಿರಹಟ್ಟಿ).— ಲೋಕೋಪಯೋಗಿ ಮಂತ್ರಿಗಳು ಈ ವಿಷಯ ಗಳನ್ನು ದಯವಿಟ್ಟು ತಿಳಿಸುವರೆ:—

(ಅ) ಧಾರವಾಡದಲ್ಲಿ ಯಾವಯಾವ ತಾಲ್ಲೂಕುಗಳಲ್ಲಿ ಎಷ್ಟು ರಿಗ್ ಭಾವಿಗಳನ್ನು ತೋಡಿಸ ಲಾಗಿದೆ, ಅವುಗಳಲ್ಲಿ ಉಪಯುಕ್ತವಾವು ಎಷ್ಟು, ನಿರುಪಯುಕ್ತವಾದವು ಎಷ್ಟು, ಯಾಕೆ;

(ಆ) ಇವುಗಳಿಗೆ ಅಳವಡಿಸಿದ ನೀರೆತ್ತುವ ಪಂಪುಗಳು ಸರಿಯಾಗಿವೆಯೇ? ಇಲ್ಲದಿದ್ದಲ್ಲಿ, ಅವನ್ನು ಸರಿಪಡಿಸಲು ಯಾವಕ್ರಮ ಕೈಗೊಂಡಿದೆ ;

(ಇ) ಶಿರಹಟ್ಟಿ ತಾಲ್ಲೂಕಿನಲ್ಲಿ ಯಾವಯಾವ ಊರಲ್ಲಿ ರಿಗ್ ಭಾವಿಗಳನ್ನು ತೋಡಲಾಗಿದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳು).—

(ಅ) ತಾಲ್ಲೂಕುವಾರು ರಿಗ್ ಭಾವಿಗಳನ್ನು ತೋಡಿಸಿರುವ ವಿವರಪತ್ರವನ್ನು ಲಗತ್ತಿಸಿರುತ್ತೆ.

ಬೋರು ಕೊರೆದ ಜಾಗದಲ್ಲಿ ಕುಡಿಯುವ ನೀರಿನ ಜಲ ಬೀಳದೆ 59 ಭಾವಿಗಳು ವಿಫಲವಾದವು.

(ಅ) 361 ಸಫಲವಾದ ಭಾವಿಗಳಲ್ಲಿ 216 ಭಾವಿಗಳಿಗೆ ಕೈ ಪಂಪನ್ನೂ 10 ಭಾವಿಗಳಿಗೆ ಪವರ್ ಪಂಪನ್ನೂ ಹಾಕಿವೆ. ಇವುಗಳ ಪೈಕಿ 77 ಕೈ ಪಂಪುಗಳು ಮತ್ತು 10 ಪವರ್ ಪಂಪುಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಉಳಿದ ಪಂಪುಗಳನ್ನು ಸರಿಪಡಿಸಲು ಸಂಬಂಧಪಟ್ಟ ಪಂಚಾಯ್ತಿಗಳ ಸಹಾಯದಿಂದ ಕ್ರಮ ಕೈಗೊಂಡಿದೆ.

(ಇ) ಶಿರಹಟ್ಟಿ ತಾಲ್ಲೂಕಿನ (1) ಮಾದವಿ (2) ಬನಾಪುರ (3) ಬೆಳ್ಳಟ್ಟಿ (4) ದೊಡ್ಡೂರು (5) ಬಳೆಹೊಸೂರು (6) ಹೆಬ್ಬಾಳ್ (7) ಚಾಪಾಳ್ (8) ಕಲ್ಲಿಗನೂರ್ (9) ಬಿಜ್ಜೂರು (10) ಬೆಲ್ಲಟ್ಟಿ (11) ಕೇರಿಹಳ್ಳಿತಾಂಡ ಈ ಊರುಗಳಲ್ಲಿ ರಿಗ್ ಭಾವಿಗಳನ್ನು ತೆಗೆದುಕೊಂಡಿದೆ.

ಶ್ರೀ ವಿ. ವಿ. ವಾಯಿ.—ಸ್ವಾಮಿ ಈಗ ಧಾರವಾಡ ಜಿಲ್ಲೆಯಲ್ಲಿ 420 ರಿಗ್ ಬಾವಿಗಳನ್ನು ತೆಗೆಸಲಾಗಿದೆ, ಅದರ ಪೈಕಿ 361 ಬಾವಿಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಇನ್ನುಳಿದವು ನಿರುಪಯುಕ್ತವಾದವು. ಇನ್ನು 216 ಬಾವಿಗಳಲ್ಲಿ 77 ಬಾವಿಗಳಿಗೆ ಕೈ ಪಂಪುಗಳನ್ನು ಹಾಕಿದೆ. ಹಾಗೆ ಇನ್ನುಳಿದ ಬಾವಿಗಳಿಗೆ ಪಂಪುಗಳನ್ನು ಹಾಕಲು ವ್ಯವಸ್ಥೆ ಮಾಡುತ್ತೀರಾ?

† ಶ್ರೀ ಹೆಚ್. ಎಂ. ಚೆನ್ನಬಸಪ್ಪ — ವ್ಯವಸ್ಥೆ ಮಾಡುತ್ತೇವೆ ಎಂದು ಉತ್ತರದಲ್ಲೇ ಕೊಟ್ಟಿದ್ದೇವೆ.

ಶ್ರೀ ವಿ. ವಿ. ವಾಯಿ.— ಸ್ವಾಮಿ, ಈಗ ಶಿರಹಟ್ಟಿ ತಾಲ್ಲೂಕಿನಲ್ಲಿ 11 ಬಾವಿಗಳನ್ನು ತೆಗೆದಿದ್ದಾರೆ, ಒಂದು ಬಾವಿಯಲ್ಲೂ ಪಂಪ್ ಹಾಕಿಲ್ಲ, ಅಲ್ಲಿ ನೀರು ಬರುವುದಿಲ್ಲ ಇನ್ನು ಬಳೇ ಹೊಸೂರಿನಲ್ಲಿ ಒಂದೆರಡು ಬಾವಿ ತೆಗೆದಿದ್ದಾರೆ ಅಲ್ಲಿಯೂ ಕೂಡ ಪಂಪುಗಳನ್ನು ಹಾಕಿಲ್ಲ, ಮತ್ತೆ ರಿಗ್ ವೆಲ್ಸ್‌ಗಳಿಗೂ ಕೂಡ ಪಂಪ್‌ಗಳನ್ನು ಹಾಕಿಲ್ಲ ಆದುದರಿಂದ ಅಲ್ಲಿ ಪಂಪ್ ಹಾಕಿ ವ್ಯವಸ್ಥೆ ಮಾಡುತ್ತೀರಾ?